ನನಗೆ ಹೇಳಿಕೆಯಿತ್ತು. ಅದಕ್ಕೆ ಮಧ್ಯಾಹ್ನವೇ ಬಂದಿದ್ದೆ. ರಾತ್ರಿ ನಿಮ್ಮಲ್ಲಿ ಬಂದು ಒಂದು ಊಟ ಪೂರೈಸಿ ಹೋಗುವಾ ಅಂತ ಲೆಕ್ಕ ಹಾಕಿದೆ' ಅಂತ ಅನ್ನುವಷ್ಟರಲ್ಲಿ ನಾನು ಸಂತೋಷದಿಂದ, 'ಬನ್ನಿ, ಬನ್ನಿ, ಮುದ್ದಾಂ ಬನ್ನಿ ಮಾರ್ರೆ, ನೀವು ಬರುವುದೇ ಅಪರೂಪ' ಅಂತ ಸ್ವಾಗತಿಸಿದೆ. ಅವರು, 'ನಿಮಗೆ ಇನ್ನೂ ಒಂದು ಸಂತೋಷದ ಸಮಾಚಾರ ಹೇಳಲಿಕ್ಕುಂಟು. ನನ್ನ ಜೊತೆ ಇಂದ್ರಕುಮಾರ್ ಕೂಡಾ ಬರ್ತಾರೆ, ಆದೀತೋ?' ಅಂತ ಬಾಯಿ ತುಂಬ ನಕ್ಕರು. 'ವಾಟ್ ಎ ಪ್ಲೆಸೆಂಟ್ ಸರ್‌ಪ್ರೈಸ್! ಇಬ್ಬರೂ ಬನ್ನಿ, ಐ ಐಮ್ ವೆರಿ ವೆರಿ ಹ್ಯಾಪಿ. ಮನೇಲಿ ನಾನು ಕಾಯ್ತಾ ಇರ್ತೇನೆ, ಆಯ್ತಾ?' ಅಂದೆ. ಇಂದ್ರಕುಮಾರರನ್ನು ಭೇಟಿಯಾಗಲು ಬಹಳ ದಿನಗಳಿಂದ ಮನಸ್ಸು ಚಡಪಡಿಸುತ್ತಿತ್ತು. ಕೂಡಲೇ ಮಡದಿಗೆ ಫೋನಾಯಿಸಿ ರಾತ್ರಿ ವಿಶೇಷ ಅಡುಗೆ ಮಾಡಲು ತಿಳಿಸಿದೆ.

ಮನೆ ಹೊರಗೆ ಯಾರೋ ಜೋರಾಗಿ ನಗುತ್ತ ಮಾತನಾಡುತ್ತಿರುವುದನ್ನು ಹಾಲ್‌ನ ಪಕ್ಕದ ಕಿಟಕಿಯಿಂದಲೇ ನೋಡಿದೆ. ಅರೆ, ನಮ್ಮ ಅತಿಥಿ – ಅಭ್ಯಾಗತರು. ಬಾಗಿಲನ್ನು ತೆರೆದು 'ಬನ್ನಿ ಬನ್ನಿ' ಅಂತ ಇಬ್ಬರನ್ನೂ ಆತ್ಮೀಯವಾಗಿ ಸ್ವಾಗತಿಸಿದೆ. 'ನೇಹಾ' ಅಂತ ಕರೆಯುವಷ್ಟರಲ್ಲಿ ನನ್ನಾಕೆ ಅದಾಗಲೇ ತನ್ನಿಬ್ಬರು ಮಕ್ಕಳೊಂದಿಗೆ ಹಜಾರದಲ್ಲಿ ಹಾಜರಾಗಿದ್ದಳು. 'ಇವಳು ನನ್ನ ಶ್ರೀಮತಿ ನೇಹಾ, ಇವರು ಇಂದ್ರಕುಮಾರ್, ಇನ್ನೊಬ್ಬರ ಪರಿಚಯ ನಿಂಗೆ ಬೇಡ' ಅಂತ ಕುಶಾಲು ಮಾಡಿದೆ. ಪರಸ್ಪರ ನಮಸ್ಕಾರಗಳ ವಿನಿಮಯ ನಡೆಯಿತು. 'ಇವ ಕಾರ್ತಿಕ್ ಏಯ್ತ್ ಸ್ಟ್ಯಾಂಡರ್ಡ್, ಅವ ರೋಹನ್ ಫೋರ್ತ್' ನೇಹಾ ಮಕ್ಕಳನ್ನು ಪರಿಚಯಿಸಿದಳು.

'ನಾನು ಇಂದ್ರ ಅಂತ, ಮತ್ತೆ ಅಮರಾವತಿಯ ಇಂದ್ರ ಅಲ್ಲ, ಧರ್ಮಸ್ಥಳದ ಹತ್ತಿರದ ನೇತ್ರಾವತಿ ನದಿ ಪಕ್ಕದಲ್ಲಿರೋ ಭಗವತಿ ಎನ್ನುವ ಊರಿನ ಇಂದ್ರ' ಅಂತ ವಿಶಿಷ್ಟವಾಗಿ ತನ್ನನ್ನು ಪರಿಚಯಿಸಿಕೊಂಡರು. 'ಮತ್ತೆ ಕುಮಾರ್?' ಕಾರ್ತಿಕ್‌ನ ತುಂಟ ಪ್ರಶ್ನೆ. 'ನಾನು ಕುಮಾರನೇ ಮಾರಾಯ, ಕುಮಾರಿ ಅಲ್ಲವಲ್ಲ' ಅಂತ ಹೇಳಿ ಆತನ ಬೆನ್ನು ತಟ್ಟಿದವರೇ ಪರ್ಸಿನಿಂದ ಐನೂರರ ಎರಡು ನೋಟುಗಳನ್ನು ತೆಗೆದು ಮಕ್ಕಳಿಗೆ ನೀಡಿದರು. ನಾನು 'ಛೆ, ಅದೆಲ್ಲಾ ಏನು' ಅಂತ ಮುಜುಗರ ಪಡುವಷ್ಟರಲ್ಲಿ 'ತಿಂಡಿ ಹಣ್ಣು ತರಲಿಕ್ಕೆ ಮರೆತುಬಿಟ್ಟೆ, ಸಾರಿ, ಅದಕ್ಕೆ ಈ ಕಂಪೆನ್ಸೇಶನ್'. 'ನಿಮಗೆ ಟೀ, ಕಾಫಿ ಯಾವುದು ಅದೀತು?' ನೇಹಾ ವಿಚಾರಿಸುವಷ್ಟರಲ್ಲಿಯೇ 'ಮ್ಯಾಡಮ್, ಮೂರು ಸ್ಟ್ರಾಂಗ್ ಕಾಫಿ, ನಂಗೆ ಶುಗರ್ ಲೆಸ್' ಎಂದರು ಇಂದ್ರ. 'ಎನಿ ಪ್ರಾಬ್ಲೆಮ್?' ಸೀತಣ್ಣ ಉವಾಚ. 'ಏನಿಲ್ಲ ಅಣ್ಣ, ಪ್ರಿಕಾಶನರಿ ಮೆಜರ್ಸ್, ಅಷ್ಟೆ' ಅಂತ ಮುಗುಮ್ಮಾಗಿ ಹೇಳಿದರು.

'ಬಾಲ್ಯದಿಂದಲೂ ನನಗೆ ಶಾಲೆ, ಪಾಠ, ಹೋಮ್‌ವರ್ಕ್, ಎಕ್ಸಾಮ್, ಎಲ್ಲವೂ ಭಯಂಕರ ಹಿಂಸೆ ಕೊಡ್ತಿತ್ತು, ಮಾರಾಯ್ರೆ' ಕುಮಾರ್ ಲಹರಿಯಿಂದಲೇ ಮಾತಿಗೆ ಶುರುವಿಟ್ಟುಕೊಂಡರು. 'ಅದ್ರೆ ಏನಾದ್ರೂ ಒಂದು ಮಾಡಬೇಕೆಂತ ಛಲ ಮೂಡಿದ್ರೆ ಮಾತ್ರ ಶತಾಯ–ಗತಾಯ ಅದನ್ನು ಮಾಡಿಯೇ ತೋರಿಸ್ತಿದ್ದೆ. ಎಲ್ಲರೂ ನನ್ನನ್ನು ದಡ್ಡ, ಮಂಗ, ಅಪಾಪೋಲಿ, ಶೆಗಣಿ ಮಂಜ ಅಂತೆಲ್ಲ ಆಡಿಕೊಳ್ತಿದ್ರು. ಪರೀಕ್ಷೆ ವೇಳೆಯಲ್ಲಿ ನಾನು ಕ್ರಿಕೆಟ್ ಮ್ಯಾಚ್ ನೋಡುವುದನ್ನೂ, ಗುಡ್ಡ–ಬೆಟ್ಟ ಸುತ್ತೂದನ್ನೂ, ಕೆರೆಯಂಚಿನಲ್ಲಿ ಕೂತು ಗಂಟೆಗಟ್ಟಲೆ ಕಾಲಹರಣ ಮಾಡುವುದನ್ನೂ ಕಂಡು ಜನರೆಲ್ಲ 'ಉಂದು ಎಂಚಿನ ಮರ್ಲ್ ಮಾರಾಯ್ರೇ' (ಇದು ಎಂತಹ ಹುಚ್ಚಾಟ ಮಾರಾಯ್ರೆ) ಅಂತೆಲ್ಲ ಟೀಕಿಸಿದಾಗ ನಾನು ಆಗ ಅಪ್ಪನಿಂದ ತಿಂದ ಧರ್ಮದೇಟಿಗೆ ಲೆಕ್ಕವೇ ಇಲ್ಲ' ಅಂತ ಸೂರು ಹಾರಿ ಹೋಗುವಂತೆ ನಕ್ಕು ತಮ್ಮ ಪ್ರವರ ಮುಂದುವರಿಸಿದರು. 'ಆದರೆ ಏನೋ ಎಂತೋ, ಅದೊಂದು ದಿನ ಇದ್ದಕ್ಕಿದ್ದಂತೆ ಜೀವನದಲ್ಲಿ ನಾನೇನಾದ್ರೂ ಸಾಧಿಸಲೇ ಬೇಕು ಅಂತ ಛಲ ಬಂತು